

ಹಾಲುಹಣ್ಣು ಕೊಟ್ಟು ಧನ್ಯವಾದ ಹೇಳಿದ್ದರು. ಇಡಿಯ ಊರು ನನ್ನನ್ನು ಮನೆಯ ಮಗಳೆಂಬಂತೆ ಕಂಡಿದ್ದಕ್ಕೊಂದು ನಿದರ್ಶನ ಇದು. ಎಲ್ಲಿ ಹೋಯಿತು ಇಂತಹ ನಿರ್ಮಲ ಮನದ ಬಾಂಧವ್ಯ ಈಗ? ಅರ್ಧ ಶತಮಾನದ ಹಿಂದಿನ ಅಂತಹ ಸುರಕ್ಷತೆಯ ವಾತಾವರಣ ಇಂದು ಊಹಿಸಲೂ ಸಾಧ್ಯವಿಲ್ಲ. ನಮ್ಮೆಲ್ಲರ ಮನಸ್ಸುಗಳೇಕೆ ಹೀಗೆ ಹುಳಿ ಹಿಂಡಿಸಿಕೊಂಡು ಹಾಳಾಗಿವೆ?

ನಾನು ಈ ಶಾಲೆಯಲ್ಲಿ ಇದ್ದ ಅವಧಿ ಮೂರು ವರ್ಷಗಳು ಮಾತ್ರ. ಅದರಲ್ಲೂ ಎರಡನೇ ವರ್ಷವೇ ಕಮ್ಮರಡಿ ಪ್ರೌಢ ಶಾಲೆಯ ಆರ್ಟ್ಸ್ ಅಧ್ಯಾಪಕರ ಕೊರತೆ ಮುಂದುವರಿದೇ ಇದ್ದಿದ್ದರಿಂದ ನನ್ನನ್ನು ಅಲ್ಲಿಗೆ ಡೆಪ್ಯುಟೇಷನ್ ಮಾಡಲಾಗಿತ್ತು. ಅಲ್ಲಿನ ಶಾಲಾಭಿವೃದ್ಧಿ ಸಮಿತಿಯವರೇ ನನ್ನನ್ನು ಅಲ್ಲಿಗೇ ವರ್ಗಾಯಿಸಿಕೊಂಡರು. ನನ್ನೂರಿನ ನಾನೋದಿದ್ದ ಶಾಲೆಗೆ ನನ್ನ ಪ್ರಯತ್ನವೇ ಇಲ್ಲದೆ ವರ್ಗವಾಗಿತ್ತಾದರೂ, ಗಿಡವನ್ನು ಬೇರು ಸಮೇತ ಕಿತ್ತು ಬೇರೊಂದೆಡೆ ನೆಡುವಾಗಿನ ನೋವಿನನುಭವವಾಗದಿರಲಿಲ್ಲ.

ವೃತ್ತಿ ಜೀವನಕ್ಕೆ ತಳಪಾಯ ಹಾಕಿಕೊಟ್ಟ ಭಂಡಿಗಡಿಯ ಶಾಲೆ ಸದಾ ಮನದಲ್ಲಿ ಮಧುರಾನುಭವ ಮಿಡಿವ ಅನುಭೂತಿ. ಅಲ್ಲಿ ನಾನು ಬಹಳವಾಗಿ ಇಷ್ಟಪಡುತ್ತಿದ್ದ ಬೋಧನೆಯನ್ನು ಬಹಳ ಚೆನ್ನಾಗಿ ನಿರ್ವಹಿಸಿದ್ದೇನೇ? ಎಂಬುದು ಇಂದಿಗೂ ನನಗೆ ಅಸ್ಪಷ್ಟ. ಈಜು ಬಾರದವನನ್ನು ನೀರಿಗೆ ಬಿಟ್ಟು ಕೈಕಾಲು ಬಡಿಯುತ್ತಾ ದಡ ಸೇರು ಎಂಬಂತಿದ್ದ ಪರಿಸ್ಥಿತಿ. ವಿದ್ಯಾರ್ಥಿಗಳ ಶಿಸ್ತುಪಾಲನೆ, ಕಾಲಕಾಲಕ್ಕೆ ಎಇಓ ಆಫೀಸಿಗೆ ಕಳಿಸಬೇಕಿದ್ದ ವರದಿಗಳು, ಅಧ್ಯಾಪಕರ ಮೀಟಿಂಗ್‌ಗಳು, ಹಲವು ರಿಜಿಸ್ಟರ್‌ಗಳನ್ನು ಬರೆಯುವುದು, ಪೇಬಿಲ್ ಮಾಡಿ ಕಳಿಸಿ ಸಂಬಳ ಬಟವಾಡೆ, ಆಟೋಟ ಸ್ಪರ್ಧೆಗಳು, ಕೇರೇಡ್ ನಿರ್ವಹಣೆ, ಎಸ್ಡಿಸಿ ಮೀಟಿಂಗ್‌ಗಳು, ರಾಷ್ಟ್ರೀಯ ಹಬ್ಬಗಳು, ವಾರ್ಷಿಕೋತ್ಸವಾಚರಣೆ, 'ಗುಂಪಿಗೆ ಸೇರದ ಪದ'ದವರನ್ನು ನಿಭಾಯಿಸುವುದು... ಹೀಗೆ ಹತ್ತು ಹಲವಾರು ಹೊಣೆಗಾರಿಕೆಗಳೆಡೆಯಲ್ಲಿ ಬಹುಶಃ ಪಾಠವೂ ಅವುಗಳಲ್ಲೊಂದಾಗಿರುತ್ತಿತ್ತೇನೋ. ಮಕ್ಕಳು ಮಾತ್ರ ತಮ್ಮ ಕುಟುಂಬದ ಸದಸ್ಯೆಯೊಬ್ಬಳಂತೆ ಪ್ರೀತಿಸಿದರು. ಕಮ್ಮರಡಿಯ ವರ್ಗಾವಣೆ ದೊಡ್ಡ ಆಘಾತವಾಗಿತ್ತವರಿಗೆ. ಅಳು ಸಿಟ್ಟು ಆಕ್ಷೇಪ ಬೇಡಿಕೆ ಎಲ್ಲ ವ್ಯಕ್ತವಾದವು. ಕಮ್ಮರಡಿ ಶಾಲೆಯಲ್ಲಿ ಹಲವಾರು ದಿನಗಳು ನನಗೆ ಈ ಶಾಲೆಯ ಮಕ್ಕಳ ಕಾಗದಗಳ ಸುರಿಮಳೆ. ಎಲ್ಲವುಗಳ ಒಕ್ಕಣೆ ಒಂದೇ– ನಾವೇನಾದರೂ ತಪ್ಪು ಮಾಡಿದ್ದರೆ ಕ್ಷಮಿಸಿ, ಮತ್ತೆ ಇಲ್ಲಿಗೇ ಬನ್ನಿ ಎಂಬುದೇ.

ಭಂಡಿಗಡಿ ಬಿಟ್ಟು ಮೂವತ್ತೈದು ವರ್ಷಗಳ ನಂತರ ಅಲ್ಲಿನ ಬಂಧುಗಳೊಬ್ಬರ ಗೃಹಪ್ರವೇಶಕ್ಕೆ ಹೋಗಿದ್ದೆ. ಅಂದಿನ ನನ್ನ ವಿದ್ಯಾರ್ಥಿ ಈಗ ಮೂರು ಮಕ್ಕಳ ತಂದೆಯಾಗಿ ತಾಲ್ಲೂಕು ಪಂಚಾಯತ್ ಸದಸ್ಯರಾಗಿದ್ದ ಮಹಮ್ಮದ್ ಬಂದಿರುವುದು ತಿಳಿದಾಗ ನಾನೇ ಹೋಗಿ ಮಾತಾಡಿಸಿದೆ. ಆಶ್ಚರ್ಯಾನಂದದ ಒಂದೆರಡು ಮಾತುಗಳಾಗುತ್ತಲೇ ಆತ 'ನೀವು ನಮ್ಮನ್ನೆಲ್ಲಾ ಬಿಟ್ಟು ಹೋಗಿಬಿಟ್ರಿ. ನಾವೆಲ್ಲಾ ಒಂದು ವಾರವಿಡೀ ಅತ್ತಿದ್ದೆವು, ಗೊತ್ತಾ?' ಎಂದು ಏರುಧ್ವನಿಯಲ್ಲಿ ಆಕ್ಷೇಪಿಸಿದಾಗ ಅಲ್ಲಿ ಕಾಲದ ಪರದೆ ಸರಕ್ಕನೆ ಸರಿದು ಅಂದಿನ ವಿದ್ಯಾರ್ಥಿ ಮತ್ತವನ ಟೀಚರ್ ಮುಖಾಮುಖಿಯಾಗಿದ್ದೆವು!

'ಹೌದಪ್ಪಾ, ಎಷ್ಟೊಂದು ಕಾಗದಗಳು ಬಂದವು ನನಗೆ, ಕಮ್ಮರಡಿಗೆ. ನೀನು ಮಾತ್ರ ಬರೆಯಲೇ ಇಲ್ಲವಲ್ಲಾ?' ಎಂದೆ. 'ನಿಮ್ಮ ಮೇಲೆ ಬಂದ ಸಿಟ್ಟಿನಿಂದಾಗಿ ಬರೆಯಲಿಲ್ಲ' ಎನ್ನುವುದೇ! ಈ ಶಾಲೆಯ ನನ್ನ ಅಂದಿನ ಕೆಲವರು ವಿದ್ಯಾರ್ಥಿಗಳು, ಸಹೋದ್ಯೋಗಿಯೊಬ್ಬರು ಇಂದಿಗೂ ನನ್ನೊಂದಿಗೆ ಸಂವಹಿಸುತ್ತಿದ್ದಾರೆ. ನಿರ್ಮಲ ಬಾಂಧವ್ಯದ ಅಮೃತವಾಹಿನಿ ಎದೆಯಿಂದಲೆದೆಗೆ ಹರಿಯುತಿದೆ ಈ ಶಾಲೆಯಿಂದಾಗಿ.

2004ರಲ್ಲಿ ಶಾಲಾ ಶತಮಾನೋತ್ಸವ ಆದಾಗ ಹೋಗಿದ್ದೆ. ಪ್ರೇಕ್ಷಕರ ಸಾಲಲ್ಲಿ ಕುಳಿತು ಕಾರ್ಯಕ್ರಮವನ್ನು ಶಾಲೆಯನ್ನು ಮನದುಂಬಿಕೊಳ್ಳುತ್ತಿದ್ದೆ. ಅಂದಿನ ಮಕ್ಕಳು ಬಂದು ಬಂದು ಮಾತಾಡಿಸಿ ಮನಕ್ಕೆ ತಂಪೆರೆಯುತ್ತಿದ್ದರು. ಸನ್ಮಾನಕ್ಕಾಗಿ ನನಗೆ ವೇದಿಕೆಗೆ ಕರೆದದ್ದು ಅನಿರೀಕ್ಷಿತವಾಗಿತ್ತು. ಮೈಕ್ ಹಿಡಿದವಳು 'ವೃತ್ತಿ ಜೀವನದ ಪ್ರಾರಂಭಿಕ ಪಾಠಗಳನ್ನು ನನಗೆ ಕಲಿಸಿಕೊಟ್ಟ ಶಾಲೆಯಿದು. ಸನ್ಮಾನಿಸಿಕೊಳ್ಳುವಂತಹದ್ದೇನನ್ನೂ ನಾನಿಲ್ಲಿ ಮಾಡಿಲ್ಲ. ನಿಮ್ಮ ಪ್ರೀತಿಗೆ ವಂದಿಸುವೆ' ಎಂದು ಹೇಳಿ ಕೆಳಗಿಳಿಯಲಿದ್ದವಳನ್ನು ತಡೆದು ಸನ್ಮಾನಿಸಿದ್ದರು. ಸಂಘಟಕರೆಂದರು, 'ನಿಮ್ಮನ್ನು ಸನ್ಮಾನಿಸಬೇಕೆಂದು ಹಳೆಯ ವಿದ್ಯಾರ್ಥಿಯೊಬ್ಬರು ನಮಗೆ ಫೋನ್ ಮಾಡುತ್ತಿದ್ದರು' ವಿದ್ಯಾರ್ಥಿಗಳ ಪ್ರೀತಿಯ ಲೇಪ ಸನ್ಮಾನಕ್ಕಿತ್ತೆಂದು ಖುಷಿಯಾಗಿತ್ತು.

ಇಂದು ಆ ಶಾಲೆಯ ಆವರಣದಲ್ಲಿ ಆಗಿನ ಎಸ್‌ಡಿಸಿ ಅಧ್ಯಕ್ಷರಾಗಿದ್ದ ಸೀತಾರಾಮಯ್ಯನವರ ಮಕ್ಕಳು ತಮ್ಮ ತಂದೆ ತಾಯಿಯ ಹೆಸರಿನಲ್ಲಿ ಗ್ರಂಥಾಲಯ ಕಟ್ಟಡ ಕಟ್ಟಿಕೊಟ್ಟಿದ್ದಾರೆ. ಆ ದೊಡ್ಡ ಶಾಲಾ ಕಟ್ಟಡದಲ್ಲಿ ಆಗಿನ ಸಂಖ್ಯೆಯ ಮಕ್ಕಳು ಈಗೆಲ್ಲಿ? ಖಾಸಗಿ ಶಾಲೆಗಳಿಗೆ ಕರೆದೊಯ್ಯಲು ಶಾಲಾ ಬಸ್‌ಗಳು ಬರುತ್ತಿವೆ. ಆಗಿಗಿಂತ ಬಹಳಷ್ಟೇ ಬದಲಾವಣೆಗಳಾಗಿವೆ. ಅಂದಿನ ನೆನಪುಗಳು ಮಾತ್ರ ಇಂದಿನ ಬದಲಾವಣೆಗಳೊಂದಿಗೆ ಬೆಸೆಯುವ ಅಮೂರ್ತ ಕೊಂಡಿಗಳಾಗಿವೆ.

**ಪ್ರತಿಕ್ರಿಯಿಸಿ: feedback@sudha.co.in**